ಲೋಕೋಪಯೋಗಿ ಇಲಾಖೆಯಂ ಕಾಮಗಾರಿಗಳ ಬಗ್ಗೆ

೧೦೬. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧೯೮೫–೮೬ ಹಾಗೂ ೧೯೮೬–೮೮ನೇ ಆಯವ್ಯಯಂಗಳ ಕೃಷ್ಣರಾಜಪುರಂ ಹೋಬಳಿ ಮಂತ್ತು ವರ್ತೂರು ಹೋಬಳಿಗೆ ಮಂಜೂರಾಗಿರುವ ಲೋಕೋಪಯೋಗಿ ಕಾಮಗಾರಿಗಳನ್ನು ಕಾರ್ಯಗತ ಮಾಡದಿರಲಂ ಕಾರಣಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಕೆ.ಆರ್. ಪುರಂ ಮತ್ತು ವರ್ತೂರು ಹೋಬಳಿಗಳಲ್ಲಿ ಆಯವ್ಯಯದಲ್ಲಿ ಒಟ್ಟು ೧೬ ಕಾಮಗಾರಿಗಳಂ ಸೇರಿದ್ದು, ಇವುಗಳಲ್ಲಿ ೧೩ ಕಾಮಗಾರಿಗಳು ಮಂಜೂರಾಗಿವೆ. ಇವುಗಳಲ್ಲಿ ೫ ಕಾಮಗಾರಿಗಳು ಪೂರ್ಣಗೊಂಡಿದ್ದು, ಇನ್ನೂ ೮ ಕಾಮಗಾರಿಗಳು ಪ್ರಗತಿಯಲ್ಲಿವೆ. ಕೃಷ್ಣರಾಜಪುರಂ ವೈಟ್ ಫೀಲ್ಡ್ ರಸ್ತೆ ಮತ್ತು ಕೃಷ್ಣರಾಜಪುರ ವೈಟ್ ಫೀಲ್ಡ್ ರಸ್ತೆಯ ಹೂಡಿ ಸಮೀಪದಿಂದ ಬೆಂಗಳೂರು–ವರ್ತೂರು ರಸ್ತೆಗೆ ಸೇರುವ ರಸ್ತೆಗಳ ಲೇನ್ ಮಾಡಿ ಬಲಪಡಿಸಿ ಕೆಲಸದ ೧೮೦ ಲಕ್ಷ ರೂ.ಗಳ ಅಂದಾಜಿಗೆ ಕೇಂದ್ರ ಸರ್ಕಾರದವರಿಗೆ ಅನುಮತಿ ಕೋರಿದ್ದು, ಅನುಮತಿ ಬಂದಮೇಲೆ ತೆಗೆದುಕೊಳ್ಳಲಾಗುವುದು. ಇನ್ನೊಂದು ಕಟ್ಟಡದ ಕೆಲಸಕ್ಕೆ ನಿವೇಶನ ಇನ್ನೂ ದೊರಕದಿರುವುದರಿಂದ ತೆಗೆದುಕೊಂಡಿಲ್ಲ.

ರಾಜ್ಯದಲ್ಲಿಯಂ ಸಣ್ಣ ನೀರಾವರಿ ಕೆರೆ ಹಾಗೂ ಏತ ನೀರಾವರಿ

೧೧೮. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇರುವ ಕೆರೆಗಳಂ ಎಷ್ಟು ಹಾಗೂ ಏತ ನೀರಾವರಿಗಳಂ ಎಷ್ಟು (ಜಿಲ್ಲಾವಾರಂ ಮಾಹಿತಿಯನ್ನು ಒದಗಿಸುವುದು).

ಆ) ರಾಜ್ಯದ ಸಣ್ಣ ನೀರಾವರಿ ಕೆರೆಗಳಿಂದ ಎಷ್ಟು ಹೆಕ್ಟೇರು ಭೂಮಿಗೆ ನೀರು ಒದಗಿಸಲಾಗುವುದು; ಇದರಂತೆ ಯಾತ ನೀರಾವರಿಯಿಂದ ಎಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು);

ಇ) ರೋಣ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕೆರೆಗಳು ಎಷ್ಟು; ಎಷ್ಟು ಹೆಕ್ಟೇರು ಭೂಮಿಗೆ ನೀರು ಒದಗಿಸಲಾಗುತ್ತಿದೆ; ಹೊಸ ಕೆರೆಗಳನ್ನು ನಿರ್ಮಿಸುವ ಸರ್ಕಾರದವರ ಉದ್ದೇಶವೇನಾದರೂ ಇದೆಯೇ?

ಶ್ರೀ ಕೆ. ಕೃಷ್ಣಮೂರ್ತಿ (ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು).—

ಅ) ೧–೪–೧೯೮೭ ರ ಪ್ರಾರಂಭಕ್ಕೆ ಕರ್ನಾಟಕ ರಾಜ್ಯದಲ್ಲಿ ೨೨,೭೩೩ ಸಣ್ಣ ನೀರಾವರಿ ಕೆರೆಗಳಂ ಮತ್ತು ೪೫೧ ಏತ ನೀರಾವರಿ ಯೋಜನೆಗಳಿವೆ (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ ೧ ರಲ್ಲಿ ಕೊಡಲಾಗಿದೆ)

ಆ) ೧–೪–೧೯೮೭ ರ ಪ್ರಾರಂಭಕ್ಕೆ ಕರ್ನಾಟಕ ರಾಜ್ಯದಲ್ಲಿ ೬,೨೮,೬೯೧ ಹೆಕ್ಟೇರು ಆಚ್ಚುಕಟ್ಟನ್ನು ಸಣ್ಣ ನೀರಾವರಿ ಕೆರೆಗಳಿಂದ ಮತ್ತು ೯೦.೪೫೯ ಹೆಕ್ಟೇರು ಆಚ್ಚುಕಟ್ಟನ್ನು ಏತ ನೀರಾವರಿ ಯೋಜನೆಗಳಿಂದ ಸಾಧಿಸಲಾಯಿತು. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ ೨ ರಲ್ಲಿ ಕೊಡಲಾಗಿದೆ)

ಇ) ೧–೪–೧೯೮೭ ರ ಪ್ರಾರಂಭಕ್ಕೆ ರೋಣ ತಾಲ್ಲೂಕಿನಲ್ಲಿ ೬ ಕೆರೆಗಳಿದ್ದು ಅದರ ಆಚ್ಚುಕಟ್ಟು ೬೩೪ ಹೆಕ್ಟೇರುಗಳಾಗಿದೆ. ರೋಣ ತಾಲ್ಲೂಕಿನಲ್ಲಿ ೧೯೮೭–೮೮ ರ ಸಾಲಿನ ಆಯವ್ಯಯದಲ್ಲಿ ಯಾವ ಸಣ್ಣ ನೀರಾವರಿ ಕೆರೆಗಳೂ ಸೇರಿಲ್ಲ.

ಅನುಬಂಧ–೧

ಜಿಲ್ಲಾವಾರು ಸಣ್ಣ ನೀರಾವರಿ ಮತ್ತು ಪಿತ ನೀರಾವರಿ ಯೋಜನೆಗಳು

(೧–೪–೧೯೮೭ ರ ಪ್ರಾರಂಭಕ್ಕೆ)

ಕ್ರಮ ಸಂಖ್ಯೆ	ಜಿಲ್ಲೆ	ಒಟ್ಟು ಸಣ್ಣ ನೀರಾವರಿ ಕೆಲಸಗಳು	ಒಟ್ಟು ಪಿತ ನೀರಾವರಿ ಯೋಜನೆಗಳು
೧.	ಬೆಂಗಳೂರು (ನಗರ)	೩೮೨	೧
೨.	ಬೆಂಗಳೂರು (ಗ್ರಾಮಾಂತರ)	೧೧೫೭	೧೬
೩.	ಕೋಲಾರ	೨೭೬೪	೪
೪.	ತುಮಕೂರು	೧೫೪೧	೧೯
೫.	ಶಿವಮೊಗ್ಗ	೩೯೫೨	೧೭
೬.	ಚಿತ್ರದುರ್ಗ	೩೬೩	೬೫
೭.	ಮೈಸೂರು	೮೧೦	೨೧
೮.	ಮಂಡ್ಯ	೭೫೪	೧೩
೯.	ಹಾಸನ	೩೦೯೪	೪೨
೧೦.	ಚಿಕ್ಕಮಗಳೂರು	೧೭೪೩	೪
೧೧.	ದಕ್ಷಿಣ ಕನ್ನಡ	೫೭೮	೧೪
೧೨.	ಕೊಡಗು	೭೧೨	೧೪
೧೩.	ಬೆಳಗಾಂ	೬೯೩	೨೭
೧೪.	ಬಿಜಾಪುರ	೧೨೮	೩೨
೧೫.	ಧಾರವಾಡ	೨೦೨೧	೨೮
೧೬.	ಉತ್ತರ ಕನ್ನಡ	೧೦೧೨	೧೪
೧೭.	ಗುಲ್ಬರ್ಗಾ	೪೨೭	೩೩
೧೮.	ಬೀದರ್	೮೪	೧೧
೧೯.	ಬಳ್ಳಾರಿ	೧೯೦	೫೨
೨೦.	ರಾಯಚೂರು	೩೨೮	೨೪
	ಒಟ್ಟು	೨೨೩೩	೪೫೧

ಅನುಬಂಧ–I

ಕರ್ನಾಟಕ ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆಗಳು ಹಂತ್ರು ಹಿತ ನೀರಾವರಿ ಯೋಜನೆಗಳಿಂದ ಜಿಲ್ಲಾವಾರು ನೀರು ಒದಗಿಸಲಾದ ಅಚ್ಚುಕಟ್ಟಿನ ವಿವರಗಳು.

(೧–೪–೧೯೮೭ ರ ಪ್ರಾರಂಭಕ್ಕೆ)

ಕ್ರಮ ಸಂಖ್ಯೆ	ಜಿಲ್ಲೆ	ಕೆರೆಗಳಿಂದ ಉಪ ಯೋಜಿತ ಪ್ರದೇಶ (ಹೆಕ್ಟೇರಂಗಳಲ್ಲಿ)	ವಿತ ನೀರಾವರಿ ಯೋಜನೆ ಯಿಂದ ಪ್ರಯೋಜಿತ ಪ್ರದೇಶ (ಹೆಕ್ಟೇರಂಗಳಲ್ಲಿ)
೧.	ಬೆಂಗಳೂರು (ನಗರ)	೮೯೮	೧೨೧
೨.	ಬೆಂಗಳೂರು (ಗ್ರಾಮಾಂತರ)	೩೩೭೭	೧೭೭೨
೩.	ಕೋಲಾರ	೫೯೬೦೭	೨೧೯
೪.	ತುಮಕೂರು	೬೩೮೩೦	೧೭೯೭
೫.	ಶಿವಮೊಗ್ಗ	೬೯೨೪೧	೨೫೪೫
೬.	ಚಿತ್ರದುರ್ಗ	೨೯೦೪೦	೫೮೬೦
೭.	ಮೈಸೂರು	೩೫೫೮೪	೪೦೮೦
೮.	ಮಂಡ್ಯ	೩೧೮೭೮	೨೪೨೮
೯.	ಹಾಸನ	೪೮೪೪೫೩	೪೩೩೫
೧೦.	ಚಿಕ್ಕಮಗಳೂರು	೨೭೦೮೦	೬೫೭
೧೧.	ದಕ್ಷಿಣ ಕನ್ನಡ	೫೨೬೯	೯೪೨
೧೨.	ಕೊಡಗು	೧೦೩೧೦	೧೩೩೩
೧೩.	ಬೆಳಗಾಂ	೨೯೯೨೩	೮೯೮೫
೧೪.	ಬಿಜಾಪುರ	೩೦೧೭೬	೭೯೯೨
೧೫.	ಧಾರವಾಡ	೬೨೪೬೯	೧೦೫೧೩
೧೬.	ಉತ್ತರ ಕನ್ನಡ	೧೬೧೧೦	೧೦೬೨
೧೭.	ಗುಲ್ಬರ್ಗಾ	೨೧೦೬೭	೯೯೩೯
೧೮.	ಬೀದರ್	೧೬೧೬೫	೩೪೧೯
೧೯.	ಬಳ್ಳಾರಿ	೧೩೯೫೦	೧೪೧೨೩
೨೦.	ರಾಯಚೂರು	೧೬೦೪೪	೮೩೧೭
	ಒಟ್ಟು	೬೨೮೬೧೧	೯೦೪೫೭

ಒಣ ಬೇಸಾಯ ಅಭಿವೃದ್ಧಿಯ ಬಗ್ಗೆ

೧೧೯. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ನಿಯಂತ್ರಿತ ಮಾರುಕಟ್ಟೆ ಮತ್ತು ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೬–೮೭ ರ ಸಾಲಿನಲ್ಲಿ ರಾಜ್ಯದಲ್ಲಿ ಒಣ ಬೇಸಾಯ ಅಭಿವೃದ್ಧಿಗೆ ಕಾದಿರಿಸಿದ ಹಣ ಎಷ್ಟು? ಹಾಗೂ ಅದರಲ್ಲಿ ಖರ್ಚಾದದ್ದು ಎಷ್ಟು?

ಆ) ಅಭಿವೃದ್ಧಿ ಸ್ವರೂಪದ ಕೆಲಸಗಳೇನು?